ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇತ್ತೀಚಿನ ಐ ಎಸ್ ಐ ವರದಿಯ ಪ್ರಕಾರ ರಾಜ್ಯದಲ್ಲಿ ಪ್ಯಾಕೇಜ್ಡ ಕುಡಿಯುವ ನೀರನ್ನು ತಯಾರಿಸುವ 61 ಕಂಪನಿಗಳು ನೊಂದಾಯಿಸಲ್ಪಟ್ಟಿವೆ.

ಆ) ಹೌದು

ಇ) 2002ನೇ ಸಾಲಿನಲ್ಲಿ 28 ಪ್ಯಾಕೇಜ್ಡ ಕುಡಿಯುವ ನೀರಿನ ಕಂಪನಿಗಳ 71 ಮಾದರಿಗಳನ್ನು ವಿಶ್ಲೇಷಣೆ ಮಾಡಲಾಗಿದ್ದು ಅವುಗಳಲ್ಲಿ 3 ಕಂಪನಿಗಳ ನಾಲ್ಕು ಮಾದರಿಗಳು ಕಲಬೆರಕೆ ಎಂದು ವರದಿ ಮಾಡಲಾಗಿದೆ ಮತ್ತು 11 ಕಂಪನಿಗಳ 21 ಮಾದರಿಗಳು ಲೇಬಲಿಂಗ್ ನಿಯಮಾವಳಿಗಳ ಉಲ್ಲಂಘನೆಯಾಗಿದ್ದು ಮಿಸ್ ಬ್ರಾಂಡೆಡ್ ಎಂದು ವರದಿ ಮಾಡಲಾಗಿದೆ.

ಈ) 61 ಕಂಪನಿಗಳು ಐ ಎಸ್ ಐ ಪರವಾನಗಿ ಪಡೆದಿವೆ.

ಕ್ರಿಮಿನಲ್ ಮೊಕದ್ದಮೆ

1671 (2107) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) - ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಕ್ರ.ಸಂ.ಎನ್.ಎಂ.ಎಲ್.(1) ವೈ.ಎನ್.ಸಿ.ಸಿ. 26:01-02 ದಿನಾಂಕ : 14.6.02ರಂದು ಹಿಂಬರಹ ಕೊಟ್ಟಿರುವುದು ನಿಜವೇ ;

ಆ) ಒಟ್ಟು ಎಷ್ಟು ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿದ್ದೀರಿ ;

ಇ) ಎಲ್ಲಾ ಪೋರ್‌ಮನ್‌ಗಳು ಹಾಗೂ ಕಂಪನಿಯ ನಿರ್ದೇಶಕರುಗಳ ವಿರುದ್ಧ ಹೂಡಲಾಗಿದೆಯೇ? ಹೂಡಿದ್ದರೆ ಅದರ ವರದಿ ಸಲ್ಲಿಸುವುದು ; ಸಲ್ಲಿಸದಿದ್ದರೆ, 9 ತಿಂಗಳಿಂದ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಹೌದು

ಆ) ಒಂದು ಪ್ರಕರಣದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ.

ಇ) ಚೀಟಿ ಕಾಯಿದೆಯ ವಿವಿಧ ಕಲಂಗಳ ಉಲ್ಲಂಘನೆಗಳಿಗೆ ಜವಾಬ್ದಾರರಾದ ಶ್ರೀರಾಮ ಚಿಟ್ಸ್ (ಬೆಂಗಳೂರು) ಪ್ರೈ ಲಿ. ಇದರ ವಿವಿಧ ಶಾಖೆಗಳಲ್ಲಿನ 78 ಪೋರ್‌ಮನ್‌ಗಳ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲು ಇಲಾಖಾಧಿಕಾರಿಗಳಿಗೆ ಸಹಕಾರ ಸಂಘಗಳ ನಿಬಂಧಕರ ಆದೇಶದಲ್ಲಿ ಅಧಿಕಾರ ನೀಡಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಇಲಾಖಾಧಿಕಾರಿಗಳು ಅಪೇಕ್ಷಿಸಿದ ಸ್ಪಷ್ಟೀಕರಣದ ಹಿನ್ನೆಲೆಯಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರು, ಬೆಂಗಳೂರುರವರು ಇಂತಹ ಅಪರಾಧಗಳನ್ನು ಅಸಂಜ್ಞೀಯ (ನಾನ್‌ಕಾಗ್ನೈಸಬಲ್) ಅಪರಾಧಗಳು ಎಂದು ಪರಿಗಣಿಸಬೇಕಾಗುತ್ತದೆ ಹಾಗೂ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಬೇಕಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ ಕಾರಣ ಸಹಕಾರ ಸಂಘಗಳ ನಿಬಂಧಕರ ಮೇಲ್ಕಂಡ ಆದೇಶವನ್ನು ಮಾರ್ಪಡಿಸಿ, ಸದರಿ ಕ್ರಿಮಿನಲ್ ಮೊಕದ್ದಮೆಯನ್ನು ಪ್ಲಬ್ಲಿಕ್ ಪ್ರಾಸಿಕ್ಯೂಟರ್ : ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್‌ರವರ ನೆರವಿನೊಂಗೆ ಸಂಬಂಧಪಟ್ಟ ಜೆ.ಎಂ.ಎಫ್.ಸಿ ನ್ಯಾಯಾಲಯಗಳಲ್ಲಿ ಸಂಬಂಧಪಟ್ಟ ಪೋರ್‌ಮನ್‌ಗಳು ಹಾಗೂ ಕಂಪನಿಯ ಅಂದಿನ ನಿರ್ದೇಶಕರುಗಳು ಮತ್ತು ಅಂದಿನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರ ವಿರುದ್ಧ ಮೊಕದ್ದಮೆ ದಾಖಲು ಮಾಡಲು ಅಧಿಕಾರ ನೀಡಲಾಗಿದೆ. ಜೊತೆಗೆ ಮೊಕದ್ದಮೆ ದಾಖಲು

ಮಾಡಲು ಅಗತ್ಯವಾದ ಮೂಲ ದಾಖಲಾತಿಗಳನ್ನು ಜರೂರಾಗಿ ಒದಗಿಸುವಂತೆ ಎಲ್ಲಾ ಫೋರ್‌ಮನ್‌ಗಳಿಗೆ ಸೂಚನೆ ನೀಡಲು ಕ್ರಮವಿಡುವಂತೆ ಶ್ರೀ ರಾಮ ಚಿಟ್ಸ್ ಸಂಸ್ಥೆಯ ಕೇಂದ್ರ ಕಛೇರಿಗೆ ಸೂಚಿಸಲಾಗಿದೆ.

ಎ.ಪಿ.ಎಂ.ಸಿ. ಗೆ ಜಮೀನು

1673 (1759) ಶ್ರೀ ಕೃಷ್ಣಪ್ಪ ವಿ. (ದೊಡ್ಡಬಳ್ಳಾಪುರ) - ಮಾನ್ಯ ಕೃಷಿ ಮತ್ತು ಮಾರುಕಟ್ಟೆ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ ಬ್ಯಾಟರಾಯನಪುರ ನಗರಸಭಾ ವ್ಯಾಪ್ತಿಯ ಅಮೃತಹಳ್ಳಿ ಸರ್ವೆ ನಂಬರುಗಳಲ್ಲಿ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ;

ಆ) ಈ ಜಮೀನನ್ನು ಯಾವ ಉದ್ದೇಶಕ್ಕೋಸ್ಕರ ವಶಪಡಿಸಿಕೊಳ್ಳಲಾಗಿದೆ ;

ಇ) ಇದು ಯಾವ ಹಂತದಲ್ಲಿದೆ ;

ಈ) ಇದರಲ್ಲಿ ರೈತರ ಜಮೀನಿನ ಹಣ ಪೂರ್ತಿ ಪಾವತಿ ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ, ಯಾವಾಗ ಪಾವತಿ ಮಾಡಲಾಗುವುದು ; (ವಿವರ ನೀಡುವುದು) ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮತ್ತು ಮಾರುಕಟ್ಟೆ ಸಚಿವರು):

ಅ) 28.29 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ) ಹಣ್ಣು ಮತ್ತು ತರಕಾರಿಗಳ ಸಗಟು ವಹಿವಾಟಿಗೆ ಆಧುನಿಕ ಮಾರುಕಟ್ಟೆ ನಿರ್ಮಿಸಲು ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಇ) ಮಾನ್ಯ ನ್ಯಾಯಾಲಯದಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ದಾವೆಗಳಿದ್ದು ಪ್ರಸ್ತುತ ಎಲ್ಲಾ ದಾವೆಗಳು ವಜಾ ಆಗಿರುತ್ತವೆ. ಜುಲೈ 2002 ಹಾಗೂ ಫೆಬ್ರವರಿ 2003ರಲ್ಲಿ ಒಟ್ಟು 28.29 ಎಕರೆ ಜಮೀನು ಸ್ವಾಧೀನಕ್ಕೆ ಪಡೆಯಲಾಗಿದೆ.

ಮಾರುಕಟ್ಟೆ ನಿರ್ಮಾಣಕ್ಕಾಗಿ ಅವಶ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಈ) ಸಂಬಂಧಿಸಿದ ಜಮೀನುಗಳ ಭೂಮಾಲೀಕರು ಪರಿಹಾರ ಹಣವನ್ನು ಪಡೆಯಲು ಅರ್ಜಿ ಸಲ್ಲಿಸದೇ ಇದ್ದ ಕಾರಣ ಒಟ್ಟು 43,84,902/ ಗಳನ್ನು ಭೂಸ್ವಾಧೀನ ಕಾಯ್ದೆ ಕಲಂ 30 ಮತ್ತು 31 ರನ್ವಯ ದಿನಾಂಕ 23.5.2002ರಂದು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಠೇವಣಿ ಮಾಡಲಾಗಿದೆ.

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಬ್ಯಾಟರಾಯನಪುರ ಎ.ಪಿ.ಎಂ.ಸಿ.ಗೆ ಭೂ ಸ್ವಾಧೀನ ಬಾಬ್ತು ಸಿಟಿ ಸಿವಿಲ್ ನ್ಯಾಯಾಲಯಕ್ಕೆ ದಿನಾಂಕ 23.5.2002ರಂದು ಠೇವಣಿ ಮಾಡಿದ ವಿವರ

ಕ್ರಮ ಸಂಖ್ಯೆ	ಸರ್ವೆ ಸಂ.	ವಿಸ್ತೀರ್ಣ	ವೋಚರ್ ಸಂ.	ಮೊಬಲಗು
1)	6:3	1-03	133:02-03	155295-00
2)	8:1ಎ	0-36	134:02-03	260044-00
3)	15:1	1-25	135:02-03	365723-00
4)	8:1 8:2	1-02	136	281010-00